ಅರಣ್ಯಕ್ಕೆ ಕೈಗಾರಿಕಾ ನಿಗಮದ ವಶದಲ್ಲಿರುವ ಮಂಗಳೂರು-ಪಡಿಲ್ ಪ್ರದೇಶವನ್ನು ಖಾಸಗೀಯವರಿಗೆ ಪರಭಾರೆ

572 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮದವರ ವಶದಲ್ಲಿರುವ ಮಂಗಳೂರು - ಪಡಿಲ್ ಪ್ರದೇಶದಲ್ಲಿರುವ ಭೂಮಿಯ ವಿಸ್ತೀರ್ಣ ಎಷ್ಟು?*

ಆ) *ಈ ಭೂಮಿಯನ್ನು ಖಾಸಗೀಯವರಿಗೆ ಪರಭಾರೆ ಮಾಡುತ್ತಿರುವುದು ನಿಜವೇ? ನಿಜವಾಗಿದ್ದಲ್ಲಿ ಅದಕ್ಕೆ ಕಾರಣಗಳೇನು? ಹಾಗೂ ಪರಭಾರೆಯನ್ನು ಯಾರಿಗೆ ಮಾಡಲಾಗುತ್ತಿದೆ?*

ಇ) *ಸ್ಥಳೀಯರಿಗೆ ಶಾಲೆ, ಆಸ್ಪತ್ರೆ, ಸರ್ಕಾರಿ ಕಛೇರಿಗಳು ಮುಂತಾದ ನಾಗರೀಕ ಸೌಲಭ್ಯಗಳಿಗೆ ಸ್ಥಳದ ಕೊರತೆ ಇರುವಾಗ ಇದನ್ನು ಖಾಸಗೀಯವರಿಗೆ ಕೊಡದೇ —ನಾಗರೀಕ—ಸೌಲಭ್ಯಗಳಿಗೆ ನೀಡುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೇ?*

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಮಂತ್ರಿಗಳು) :

ಅ) 7.23 ಎಕರೆ

ಆ) ಇಲ್ಲ

ಇ) ಈ ಪ್ರದೇಶ ನಿಗಮಕ್ಕೆ ಬೇಕಾಗಿರುತ್ತದೆ.

ಮೈಸೂರಿನಲ್ಲಿ ರಾಷ್ಟ್ರೀಯ ಕ್ರೀಡೆಗಳಿಗಾಗಿ ಸಿದ್ಧತೆ

449 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಮೈಸೂರಿನಲ್ಲಿ ರಾಷ್ಟ್ರೀಯ ಕ್ರೀಡೆಗಳಿಗೆ ನಡೆಯುತ್ತಿರುವ ವಿವಿಧ ಕಾಮಗಾರಿಗಳು ಕಳಪೆ ದರ್ಜೆಯದ್ದಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೂಡಲೆ ತೆಗೆದುಕೊಂಡಿರುವ ಕ್ರಮಗಳೇನು?*

ಇ) *ಕ್ರೀಡೆ ಸಂದರ್ಭಕ್ಕೆ ಮೈಸೂರಿನ ರಸ್ತೆಗಳನ್ನು ಉತ್ತಮಗೊಳಿಸುವುದರ ಬಗ್ಗೆಯೂ ಸಹ ಸರ್ಕಾರದವರು ಕ್ರಮ ಕೈಗೊಳ್ಳುವರೆ?*

ಶ್ರೀ ಅಜಯಕುಮಾರ್ ಸರ್. ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು) :

ಅ) ಬಂದಿರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಹೌದು

ಧಾರವಾಡ ಕ್ಷೇತ್ರದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ

568 - ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಧಾರವಾಡದಲ್ಲಿಯ ಮತಕ್ಷೇತ್ರದ ಎಲ್ಲಾ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು ಹಾಗೂ ಅವುಗಳ ಪೂರ್ಣ ಹೆಸರುಗಳ ವಿವರ ನೀಡುವುದು?*